ಓ.ಎಸ್.ನಂ.48/2015

ಡಿ .ಡಬ್ಲ್ಯೂ- 1

**ದಿನಾಂಕ: 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ವಾದಿ ಪರ ಶ್ರೀ ಜಿ ಎಂ **ವಕೀಲರಿಂದ**

ವಾದಿಯು ನನ್ನ ದೊಡ್ಡಪ್ಪ ಆಗಿರುತ್ತಾರೆ. ನನ್ನ ತಂದೆ ಕೃಷ್ಣಪ್ಪನವರಿಗೆ 5 ಜನ ಮಕ್ಕಳಿರುತ್ತಾರೆ. ಮೊದಲನೇಯರು ಮೀನ, 2ನೇ ವಸಂತ, 3ನೇ ನರಸಿಂಹಮೂರ್ತಿ, 4ನೇ ಮಮತ, 5ನೇ ಯವರು ವೀಣಾ. ನನ್ನ ತಂದೆಯವರಿಗೆ 4 ಎಕರೆ ಜಮೀನು ಸ್ವಂತ ಇದ್ದು, 2 ಎಕರೆ ಜಮೀನು ಪಿತ್ರಾರ್ಜಿತ ಆಸ್ತಿ ಅಗಿರುತ್ತದೆ. ಒಟ್ಟು 6 ಎಕರೆ. ಸರ್ವೆ ನಂ.166 ರಲ್ಲಿ 4 ಎಕರೆ ಗೋಪಾಲ ಕಾಲೋನಿಯಲ್ಲಿರುತ್ತದೆ. ಸರ್ವೆ ನಂ.23/121 ರಲ್ಲಿ 2 ಎಕರೆ ಭದ್ರಾವತಿ ಬೊಮ್ಮನಹಳ್ಳಿ ಗಡಿಯಲ್ಲಿರುತ್ತದೆ ಮತ್ತು ಸರ್ವೆ ಭದ್ರಾವತಿ ತಾಲ್ಲೂಕು ಕಾರೇಹಳ್ಳಿ ಗಡಿಯಲ್ಲಿ ಸರ್ವೆ ನಂ.8 ರಲ್ಲಿ 1 ಎಕರೆ 10 ಗುಂಟೆ ಇರುತ್ತದೆ. ಭದ್ರಾವತಿ ತಾಲ್ಲೂಕಿನಲ್ಲಿರುವ 2 ಎಕರೆ ಮತ್ತು 1 ಎಕರೆ 10 ಗುಂಟೆ ಜಮೀನು ನಿಮ್ಮ ತಂದೆಗೆ ಸರ್ಕಾರದಿಂದ ಮಂಜೂರಾದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ ಸರ್ವೆ ನಂ.23/121 ರಲ್ಲಿ 2 ಎಕರೆ ಪಿತ್ರಾರ್ಜಿತ ಆಸ್ತಿ ಆಗಿದ್ದ, ಸರ್ವ ನಂ 8 ರಲ್ಲಿರುವ 2 ಎಕರೆ 10 ಗುಂಟೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದುನುಡಿದಿರುತ್ತಾರೆ.

ನನ್ನ ಅಜ್ಜನಿಗೆ 5 ಜನ ಗಂಡು ಮಕ್ಕಳಿದ್ದ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಸಾಕು ಮಗ ಇರುತ್ತಾರೆ. ಅವರುಗಳು, ಮೊದಲಟ್ಟಿ ಗೌಡ, ಕೃಷ್ಣಪ್ಪ, ಈಶ್ವರಪ್ಪ, ಗೋವಿಂದಪ್ಪ, ಉಗ್ರಿಯಪ್ಪ, ಸಾಕು ಮಗ ತಿರುಮಲಯ್ಯ, ಗೌರಮ್ಮ ಮತ್ತು ಜಯಮ್ಮ ಆಗಿರುತ್ತಾರೆ. ನನ್ನ ಅತ್ತೆಯರಾದ ಗೌರಮ್ಮ ಮತ್ತು ಜಯಮ್ಮ ತೀರಿಕೊಂಡಿರುತ್ತಾರೆ. ನಮ್ಮ ತಾತನಾದ ತಿರುಮಲಯ್ಯ ರವರಿಗೆ 10 ಎಕರೆ ಜಮೀನು ಇತ್ತು. 10 ಎಕರೆ ಜಮೀನಿನಲ್ಲಿ ಅವರ ಮಕ್ಕಳು, ಮತ್ತು ಸಾಕು ಮಗ ಎಲ್ಲರೂ ಸೇರಿ ವಿಭಾಗ ಮಾಡಿಕೊಂಡಿದ್ದು, ಮೊದಲಟ್ಟಿ ಗೌಡರವರಿಗೆ ಸರ್ವೆ ನಂ.167 ರಲ್ಲಿ 4 ಎಕರೆ ನೀಡಿರುತ್ತಾರೆ. ನನ್ನ ತಂದೆ ಕೃಷ್ಣಪ್ಪನವರಿಗೆ ಸರ್ವೆ ನಂ.23 ರಲ್ಲಿ 2 ಎಕರೆ ನೀಡಿರುತ್ತಾರೆ. ಈಶ್ವರಪ್ಪರವರಿಗೆ ಸರ್ವೆ ನಂ.23 ರಲ್ಲಿ ಎರಡೂವರೆ ಎಕರೆ ನೀಡಿರುತ್ತಾರೆ. ಸಾಕುಮಗನಾದ ತಿರುಮಲಯ್ಯನವರಿಗೆ ಸರ್ವೆ ನಂ.23 ರಲ್ಲಿ 3 ಎಕರೆ ನೀಡಿರುತ್ತಾರೆ. ಈಶ್ವರಪ್ಪನವರಿಗೆ ಸರ್ವೆ ನಂ.23 ರಲ್ಲಿ ಎರಡೂವರೆ ಎಕರೆ ನೀಡಿರುತ್ತಾರೆ. ನನ್ನ ತಂದೆಯ ಸರ್ವೆ ನಂ.166 ಜಮೀನಿನ ಪೂರ್ವ ದಿಕ್ಕಿಗೆ

10 ಅಡಿ ರಸ್ತೆ ಬಂದಿದ್ದು, ಅದರ ನಂತರ ಮೊದಲಟ್ಟಿಗೌಡರವರ 167 ಜಮೀನು ಬರುತ್ತದೆ. 10 ಅಡಿ ರಸ್ತೆಯು 167 ದಕ್ಷಿಣ ಭಾಗದಿಂದ ಸರ್ವೆ ನಂ.23 ರ ತುದಿಯವರೆಗೂ ಬೊಮ್ಮನಹಳ್ಳಿ ಗಡಿಯವರೆಗೂ ಬರುತ್ತದೆ. 10 ಅಡಿ ರಸ್ತೆಯು 167 ಸರ್ವೆ ನಂಬರ್ ನ ಜಮೀನಿಗೆ ಸೇರಿದಂತಹ ಜಾಗ ಆಗಿರುತ್ತದೆ. ನನ್ನ ತಂದೆಯ ಸರ್ವೆ ನಂ166 ರ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ 10 ಅಡಿ ರಸ್ತೆ ಹಾಗೂ 167 ವಾದಿಯ (ಮದಲಟ್ಟಿಗೌಡ) ಜಮೀನು, ಪಶ್ಚಿಮಕ್ಕೆ ಬಿ ಎಂ ರಮೇಶ್ ರವರ ಜಮೀನು, ಉತ್ತರಕ್ಕೆ ತಿರುಮಲಯ್ಯರವರ ಜಮೀನು, ದಕ್ಷಿಣಕ್ಕೆ ಸರ್ವೆ ನಂ .52 ಸರ್ಕಾರಿ ಜಾಗವಾಗಿದ್ದು, ಅದರಲ್ಲಿ ಕೃಷ್ಣಪ್ಪ ಮೀನ ಸಾಗುವಳಿ ಮಾಡುತ್ತಿರುವ ಜಮೀನು. ಸರ್ವೆ ನಂ.23 ರಲ್ಲಿ ಬಾವಿ ಇದ್ದು, ಅದರಿಂದ ಎಲ್ಲಾ ಜಮೀನಿನವರು ನೀರಿನ ವ್ಯವಸ್ಥ ಮಾಡಿಕೊಂಡಿರುತ್ತಾರೆ. ಸರ್ವೆ ನಂ.166 ರಲ್ಲಿ ಹಾಗೂ 167 ರಲ್ಲಿ ನೀರಿನ ಬೋರ್ ನ್ನು ಯಾರೂ ಹಾಕಿಸಿರುವುದಿಲ್ಲ. ಸರ್ವೆ ನಂ.52 ರ ಜಮೀನಿನ ಬಾಬ್ತು ನಮ್ಮ ತಂದೆಯವರು ನನ್ನ ದೊಡ್ಡಪ್ಪನಾದ ಮೊದಲಟ್ಟಿಗೌಡರ ಮೇಲೆ ದಾವೆ ಹೂಡಿದ್ದರು ಎಂದರೆ ಸರಿ. ನನ್ನ ತಂದೆಯವರು ಮೊದಲಟ್ಟಿಗೌಡರವರು ಬಂದು ತನ್ನ ಜಮೀನಿಗೆ ತಂಟೆ ತಕರಾರು ಮಾಡುತ್ತಾರೆಂದು ದಾವ ಹೂಡಿರುತ್ತಾರೆ.

ನಮ್ಮ ತಂದೆಯವರು ಮನೆ ಕಟ್ಟುವ ವಿಚಾರವಾಗಿ ದೊಡ್ಡಪ್ಪನಾದ ಮೊದಲಟ್ಟಿಗೌಡರು ಗಲಾಟೆ ಮಾಡುತ್ತಿದ್ದು, ಆ ಕಾರಣದಿಂದ ದಾವೆ ಹೂಡಿರುತ್ತಾರೆ. ನನ್ನ ವಿವಾಹವು 1992 ನೇ ಇಸವಿಯಲ್ಲಿ ಶ್ರೀರಂಗಪಟ್ಟಣಕ್ಕೆ ಕೊಟ್ಟು ಮಾಡಿರುತ್ತಾರೆ. ನನ್ನ ಯಜಮಾನರು ದಿನಗೂಲಿಯ ಕಾಂಟ್ರಕ್ಟರ್ ಕೆಲಸವನ್ನು ಮುನಿಸಿಪಾಲಿಟಿಯಲ್ಲಿ ಮಾಡುತ್ತಿದ್ದರು. ನೀವು ಮದುವೆಯಾದ ಅಲ್ಲೇ ವಾಸವಿದ್ದಿರಿ ಎಂದರೆ ಸಾಕ್ಷಿ ನಾನು ನನ್ನ ತಂದೆ ತಾಯಿಯವರನ್ನು ನೋಡಿಕೊಂಡು ಓಡಾಡುತ್ತಿದ್ದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.52 ರ ಜಮೀನಿನ ಬಾಬ್ತು ಮೊದಲಟ್ಟಿಗೌಡರು 1 ಎಕರೆ ಜಮೀನಿಗೆ ಬಗರ್ ಹುಕುಂನಲ್ಲಿ ಸಾಗುವಳಿ ಮಾಡುತ್ತಿರುವ ಬಗ್ಗೆ ಅರ್ಜಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು 167 ಜಮೀನನ್ನು ಸೇರಿಸಿಕೊಂಡು ಅರ್ಜಿ ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಸರ್ವೆ ನಂ.167 ಜಮೀನಿನ ದಕ್ಷಿಣಕ್ಕೆ ಸರ್ವೆ ನಂ.52 ಜಮೀನು

ಬರುತ್ತದೆ ಎಂದರೆ ಸರಿ. ಸರ್ವೆ ನಂ166 ಜಮೀನಿನ ದಕ್ಷಿಣ ಭಾಗಕ್ಕೂ ಸರ್ವೆ ನಂ.52 ಜಮೀನು ಬರುತ್ತದೆ. ನನ್ನ ತಂದೆಯವರು ಕಟ್ಟಿರುವ ವಾಸದ ಮನೆ ಸರ್ಕಾರಿ ಜಮೀನಿನ ಸರ್ವೇ ನಂ.52 ರಲ್ಲಿ ಇರುತ್ತದೆ. ಸರ್ವೆ ನಂ.166 ರಲ್ಲಿ ನೀವುಗಳು ಸೇರಿ ಭಾಗ ಮಾಡಿಕೊಂಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.166 ನನ್ನ ತಂದೆಯಾದ ಕೃಷ್ಣಪ್ಪನವರ ಹೆಸರಿಗೆ ಖಾತೆ ಇರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಸರ್ವೆ ನಂ52 ರ ದಾಖಲಾತಿಯನ್ನು ಮಾತ್ರ ಹಾಜರುಪಡಿಸಿರುತ್ತೇವೆ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**